ಆನಂದ್‌ಕುಮಾರ್, ಚಿತ್ರದುರ್ಗ

● ಸೌದೆ ಹೋಯ್ತು, ಸೀಮೆಯೆಣ್ಣೆ ಬಂತು; ಸೀಮೆಯೆಣ್ಣೆ ಹೋಯ್ತು, ಗ್ಯಾಸ್ ಬಂತು. ಮುಂದೆ?



ಕಿಚ್ಚೇ ಹೋಯ್ತು, ಆನ್‌ಲೈನ್ ಫುಡ್ ಬಂತು.

ಎಸ್ಸೆಮ್ಮೆ, ಕಡೂರು

● ಪತಿಯ ಆಯುಷ್ಯ ವೃದ್ಧಿಗೆ ಪ್ರಾರ್ಥಿಸುವ ಹಬ್ಬ ಇರುವಂತೆ ಸತಿಯ ಆಯುಷ್ಯ ವೃದ್ಧಿಗೆ ಏಕಿಲ್ಲ?

ಹೊಸರುಚಿಯ ಪ್ರಯೋಗಕ್ಕೆ ಬಲಿಯಾಗುವ ಭೀತಿ ಇರುವುದು ಸತಿಗಲ್ಲದೆ ಪತಿಗೇ ಆದ್ದರಿಂದ.

ಗಾಯತ್ರೀ ಅಯ್ಯರ್, ಬೆಂಗಳೂರು

● ರಾಜಕೀಯ ನಾಯಕರು ಬರೀ ಕಣ್ಣೀರು ಸುರಿಸಿದರೆ ತಮ್ಮ ಕುರ್ಚಿ ಕಾಯಂ ಅಂತಾನೋ...?

ಊಹೂಂ. ಆಳಲು ಯುಕ್ತರಲ್ಲದವರಿಗೆ ಅಳುವುದೇ ಕುಯುಕ್ತಿ, ಶಕ್ತಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

● ನುಡಿದರೆ ಮುತ್ತಿನ ಹಾರದಂತಿರಬೇಕು. ಮುನಿದರೆ?



ನಾಲಿಗೆ ಜಾರದಂತಿರಬೇಕು.

ಎಂ.ಎ. ಕುಮಾರ್, ಬೆಂಗಳೂರು

● ದೇವರು ಸಹ ತಮ್ಮ ಮಡದಿಯರ ಮಾತನ್ನು ಪಾಲಿಸುತ್ತವೆಯಲ್ಲ..?

ಕೇಳದಿದ್ದರೆ ಹೆಂಡತಿ ದುರ್ಗಿ, ಕಾಳಿ, ಚಾಮುಂಡಿ ಆದಾಳೆಂಬ ಭೀತಿ ಸುರರಿಗೂ ತಪ್ಪಿದ್ದಲ್ಲ.

ಶಿ.ಯ. ರವೀಂದ್ರನಾಥ್, ಬೀದರ್

● ಸೀರಿಯಲ್ ಸಂತೆಗೂ, ಶನಿವಾರ ಸಂತೆಗೂ ಇರುವ ವ್ಯತ್ಯಾಸವೇನು?

ಶನಿವಾರ ಸಂತೆ ರಸಭರಿತ; ಸೀರಿಯಲ್ ಸಂತೆ ಸರಸಭರಿತ.

ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ

● ಉಳುವ ಯೋಗಿ ಉಳುಮೆ ನಿಲ್ಲಿಸಿದರೆ ಉಳಿಯೋವ್ರು ಯಾರು?

ಉಳುವ ಯಂತ್ರಗಳು; ಮಗ ನಿಂತರೂ ಜಗ ನಿಲ್ಲದು ಎನ್ನುತ್ತದೆ ಮಣ್ಣು.

ಎಸ್ಸೆನ್. ಮಹಾಬಲರಾವ್, ಎನ್ನಾರ್‌ಪುರ

● ಧಾರೆಗೂ ಮುನ್ನ ಸರ್ವಸ್ವವನ್ನೂ ಧಾರೆ ಎರೆದಿರುವಳಲ್ಲಾ...?

ಆಧುನಿಕ ಕುಂತಿ! ಇನ್ನೇನು ಮಾಡಲಾದೀತು, ಕುರುಕ್ಷೇತ್ರಕ್ಕೆ ಸಿದ್ಧರಾಗಿ.

ಕುಮಾರ ಚಲವಾದಿ, ಹೊಳೆನರಸಿಪುರ

● ವಿದ್ಯೆ ಮತ್ತು ಬುದ್ಧಿ ಇರದವರೂ ಇದ್ದಾರೆಯೇ?

ಇರುವುದಷ್ಟೇ ಅಲ್ಲ, ನಾಯಕರಾಗಿಯೂ ಇದ್ದಾರೆ. ಥೈಲಿಯಿದ್ದವ ಏಲಾದರೂ ಓಕೆ.

ಸವಿತಾ ಸುಟ್ಟಟ್ಟಿ, ಬನಹಟ್ಟಿ

● ಸತ್ಯವನ್ನು ಬೂದಿ ಮುಚ್ಚಿದ ಕೆಂಡ ಎನ್ನುತ್ತಾರೆ. ಸುಳ್ಳು?

ಬೂದಿ ಮುಚ್ಚಿದ ಭಂಡ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

● ಕಥೆಗಾರನಿಗೂ ಕವಿಗೂ ಶಿಲ್ಪಿಗೂ ಅಂತರವೇನು?

ವಿಷಯವೊಂದಕ್ಕೆ ವಲಯವಿತ್ತವ ಕಥೆಗಾರ, ಲಯವಿತ್ತವ ಕವಿ, ಆಲಯವಿತ್ತವ ಶಿಲ್ಪಿ.

ದೀಪಾ ವಿ. ಮಹಾಲೆ, ಸಾಂಬ್ರಾಣಿ

● ಮನುಷ್ಯರಲ್ಲಿ ಮನುಷ್ಯತ್ವಕ್ಕಿಂತ ಪಶುತ್ವವೇ ಹೆಚ್ಚಾಗಲು ಕಾರಣ?

ಮನುಷ್ಯನ ಅತ್ಯುತ್ತಮ ಸ್ನೇಹಿತ ನಾಯಿ; ಕ್ಲೋಸ್ ಫ್ರೆಂಡನ್ನು ಅನುಕರಿಸುವುದು ಸ್ವಾಭಾವಿಕ.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

● ಮಾನವರಿಗೆ ಉಪಟಳ ನೀಡುವ ಕ್ರಿಮಿಕೀಟಗಳನ್ನೇಕೆ ಭಗವಂತ ಸೃಷ್ಟಿಸಿದ?

ಉಲ್ಟಾ ಹೇಳುತ್ತಿದ್ದೀರಿ. ಮೊದಲು ಸೃಷ್ಟಿಯಾದ ಕ್ರಿಮಿಕೀಟಗಳ ಎಂಟರ್‌ಟೈನ್‌ಮೆಂಟ್‌ಗಾಗಿ ನರನನ್ನು ಸೃಷ್ಟಿಸಿದ್ದು.

## ಬಹುಮಾನಿತ ಪ್ರಶ್ನೆ

ಸಿ.ಎನ್. ವಿಜಯಲಕ್ಷ್ಮಿ, ಶಿವಮೊಗ್ಗ

● ಧಾರಾವಾಹಿಗಳಲ್ಲಿ ಕೊನೆಗೆ ಉತ್ತರಗಳು ದೊರೆಯುತ್ತವೆಂದು ಗೊತ್ತಿದ್ದರೂ ಸಂವಾದ ಕಾರ್ಯಕ್ರಮವೇಕೆ?

ಧಾರಾವಾಹಿ ಮುಗಿಯುವವರೆಗೆ ಬದುಕದ ಅಲ್ಪಾಯುಷಿಗಳಿಗೂ ಉತ್ತರ ಸಿಗಲೆಂಬ ಆಶಯ.

ಎ. ಕೃಷ್ಣಾನಂದಶೆಟ್ಟಿ, ಮುಲ್ಕಿ

● ಕಣ್ಣಿನಲ್ಲಿ ಮಿಂಚಿದೆ. ಹೂವಿನಲ್ಲಿ ಸುಗಂಧವಿದೆ; ಸರ್ಪದಲ್ಲಿ ವಿಷವಿದೆ. ಮುಗುಳ್ನಗೆಯಲ್ಲಿ ಏನಿದೆ?

ವರ್ತಕನದಾದರೆ ಹೊಂಚಿದೆ; ರಾಜಕಾರಣಿಯದಾದರೆ ಸಂಚಿದೆ; ನಲ್ಲೆಯದಾದರೆ ಮೆಚ್ಚಿದೆ, ಹುಚ್ಚಿದೆ.

ವಿ. ಹಮೀದ್, ವಿಟ್ಲ

● ಕೆಲಸವಿಲ್ಲದೆ ಅಲೆಯುವ ಪೋಲಿ ಹುಡುಗರ ಬಲೆಗೆ ಹುಡುಗಿಯರು ತಕ್ಷಣ ಬೀಳುತ್ತಾರೇಕೆ?




ಇದನ್ನೂ ಕೇಳಬೇಕೆ? ನಿಮ್ಮ ಬಲೆಗೆ ಬಿದ್ದವಳನ್ನೇ ಕೇಳಿದ್ದರೆ ಹೇಳಿಬಿಡುತ್ತಿದ್ದಳು!

ಕುಮಾರ ಚಲವಾದಿ, ಹಾಸನ

● ನೀವು ಬೈಕ್‌ನಲ್ಲಿ ಹೋಗುವಾಗ ಸುಂದರವಾದ ಹುಡುಗಿ ಡ್ರಾಪ್ ಕೇಳಿದರೆ?

ಯಾವ ಸಂತೋಷಕ್ಕೆಂದು ಡ್ರಾಪಿಸಲಿ? ಹೆಲ್ಮೆಟ್, ಇಯರ್‌ಫೋನ್ ಧರಿಸಿದವಳ ಅಂದ ಕಾಣದು, ಮಾತೂ ಆಡಳು.

ಪಿ. ಜಯವಂತ ಪೈ, ಕುಂದಾಪುರ

● ದಿಕ್ಸೂಚಿ ಭಾಷಣ ಎಂದರೇನು?

ಅಯಸ್ಕಾಂತ ಗುಣದಂತೆಯೇ ಸ್ವಜನ ದ್ವೇಷ, ಪರಜನ ಪ್ರೀತಿಯನ್ನು ತೋರುವ ಭಾಷಣ.

■ ರಾಮ್